**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.**

ದಿನಾಂಕಃ 30 ನೇ ಜನವರಿ ತಿಂಗಳು 2026 ರಂದು

ಸಿಸಿ ನಂ**.1094/2025**

ಫಿರ್ಯಾದುದಾರಃ ಶ್ರೀಮತಿ ಪುಷ್ಪಾ ಚಂದ್ರಶೇಖರ ಅಗಸಿಬಾಗಿಲ

ವಿರುದ್ಧ

ಆರೋಪಿಃ ಉಮೇಶ ಗೋಪಾಲ ನಾಗಜ್ಜನವರ

ಆರೋಪಣೆ

ಶ್ರೀ ಅಮೊಲ ಜಯಕುಮಾರ ಹಿರಿಕುಡೆ, ಪ್ರಭಾರ **1** ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹಾನಗಲ್ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಆರೋಪಣೆ ಹೊರಿಸುವುದೆನೆಂದರೆಃ

ಆರೋಪಿಯಾದ ನೀವು ಹಾಗೂ ದೂರುದಾರಳು **7-8** ವರ್ಷಗಳಿಂದ ಪರಿಚಯಸ್ಥರಾಗಿದ್ದು ನೀವು ನಿಮ್ಮ ಮನೆಯ ಹಣಕಾಸಿನ ಅಡಚಣೆಗಾಗಿ **2023** ರ ಜೂನ್ ತಿಂಗಳ ಮೊದಲನೇ ವಾರದಲ್ಲಿ ರೂ**. 7,50,000/-**ಗಳನ್ನು ದೂರುದಾರಳಿಂದ ಕೈಗಡ ಸಾಲ ಪಡೆದು ಅದನ್ನು ಮೂರು ತಿಂಗಳ ಒಳಗಾಗಿ ಮರುಪಾವತಿಸುತ್ತೇನೆಂದು ಹೇಳಿರುತ್ತೀರಿ ಎಂತಲೂ ಹಾಗೂ ಸದರಿ ಹಣದ ಮರುಪಾವತಿ ಬಾಬತ್ತು ನೀವು ದಿಃ **17.09.2025** ರಂದು ನಿಮ್ಮ ಬಾಬ್ತು ಸ್ಟೇಟಬ್ಯಾಂಕ ಆಫ್ ಇಂಡಿಯಾ ಬ್ಯಾಂಕ್ ಶಾಖೆ ಹಾನಗಲ್ ಗೆ ಸಂಬಂಧಿಸಿದ ಚೆಕ್ ಸಂಖ್ಯೆ **690952** ನೇದ್ದನ್ನು ರೂ**. 7,50,000/-** ದಿನಾಂಕಃ **17.09.2025** ಎಂದು ನಮೂದಿಸಿ ನೀವು ಸದರಿ ಚೆಕ್ಕನ್ನು ದೂರುದಾರನಿಗೆ ನೀಡಿರುತ್ತೀರಿ**.** ಸದರಿ ಚೆಕ್ಕನ್ನು ದೂರುದಾರರು ತಮ್ಮ ಬ್ಯಾಂಕ್ ಮುಖಾಂತರ ನಗದಿಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ದಿಃ **18.09.2025** ರಂದು **Funds insufficient** ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಅಮಾನ್ಯ ಮಾಡಿ ಕಳುಹಿಸಿರುತ್ತಾರೆ**.** ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮಗೆ ದೂರುದಾರ ಪರ ವಕೀಲರು ದಿಃ **08.10.2025** ರಂದು

ನೊಂದಾಯಿತ ಅಂಚೆ ಮೂಲಕ ನೋಟಿಸನ್ನು ನೀಡಿದ್ದು ಸದರಿ ನೋಟಿಸ ನಿಮಗೆ ದಿನಾಂಕ **15.10.2025** ರಂದು ಜಾರಿಯಾಗಿದ್ದು ಆನಂತರ ನೀವು ದೂರುದಾರರ ಸಾಲದ ಹಣವನ್ನು ಮರಳಿ ನೀಡುವುದಾಗಲಿ ನಿಗದಿತ ಸಮಯದಲ್ಲಿ ಮಾಡಿಲ್ಲ. ಆದ್ದರಿಂದ ನೀವು ನೇಗೋಷಿಯೇಬಲ ಇನ್ಸ್ಟ್ರುಮೆಂಟ ಕಾಯ್ದೆ ಕಲಂ.**138** ನೇದ್ದರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | |
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸ್ಥಳಃ ಹಾನಗಲ್

ದಿನಾಂಕಃ 30.01.2026

(ಶ್ರೀ ಅಮೊಲ ಜಯಕುಮಾರ ಹಿರಿಕುಡೆ,)
C/C 1 ನೇ ಹೆಚ್ಚುವರಿ ಹಿರಿಯ ಹಾಗೂ ಪ್ರಥಮ ದರ್ಜೆಯ
ನ್ಯಾಯಿಕ ದಂಡಾಧಿಕಾರಿಗಳು
ಹಾನಗಲ್.